**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು , ಗುಂಡ್ಲುಪೇಟೆ**

**ಸಿಸಿ ನಂ.286/2023**

**ಫಿರ್ಯಾದುದಾರರು** : **ತೆರಕಣಾಂಬಿ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿ** : **ಶ್ರೀ ಎಸ್ ಕಾಳಪ್ಪ** ಬಿನ್ ಲೇಟ್ ಶಿವಬಸಪ್ಪ
45 ವರ್ಷ ವಯಸ್ಸು
ವೃತ್ತಿಃ ಅಂಗಡಿ ವ್ಯಾಪಾರ
ವಾಸಃ ಕುಂದಕೆರೆ ಗ್ರಾಮ
ಗುಂಡ್ಲುಪೇಟೆ ತಾಲ್ಲೂಕು.

## ದೋಷಾರೋಪಣೆ

**ಶ್ರೀ. ಶಿವಕುಮಾರ.ಜಿ.ಜೆ, ಬಿ.ಎ, ಎಲ್.ಎಲ್.ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಗುಂಡ್ಲುಪೇಟೆ** ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

ದಿನಾಂಕಃ 29.03.2023 ರಂದು ಸಂಜೆ ಸುಮಾರು 4.15 ಗಂಟೆ ಸಮಯದಲ್ಲಿ ತೆರಕಣಾಂಬಿ ಪೊಲೀಸ್ ಠಾಣಾ ಸರಹದ್ದು ಕುಂದಕೆರೆ ಗ್ರಾಮದ ಆರೋಪಿಯಾದ ನೀವು, ನಿಮ್ಮ ಮನೆಯ ಹತ್ತಿರ ಇರುವ ಔಟ್ ಹೌಸ್ ನಲ್ಲಿ 90 ಎಂ ಎಲ್ ನ ರೂ.26,438/- ಬೆಲೆ ಬಾಳುವ ಒಟ್ಟು 666 ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಯಾವುದೇ ರಹದಾರಿ ಇಲ್ಲದೇ ಅಕ್ರಮವಾಗಿ ಸಾಗಾಣಿಕೆ ಮಾಡಿ ಮಾರಾಟ ಮಾಡಲು ಸಂಗ್ರಹಿಸಿದ್ದು, ಆ ಮೂಲಕ ನೀವು ಆರೋಪಿಯಾದ

ನೀವು **ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಆದ್ದರಿಂದ, ಆರೋಪಿಯಾದ ನೀವು ಮೇಲ್ಕಂಡ ದಂಡನೀಯ ಅಪರಾಧಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 17.08.2024

**( ಶಿವಕುಮಾರ ಜಿ. ಜೆ )**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,**
**ಗುಂಡ್ಲುಪೇಟೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು , ಗುಂಡ್ಲುಪೇಟೆ**

**ಸಿಸಿ ನಂ.286/2023**

**ಫಿರ್ಯಾದುದಾರರು** : **ತೆರಕಣಾಂಬಿ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿ** : **ಶ್ರೀ ಎಸ್ ಕಾಳಪ್ಪ** ಬಿನ್ ಲೇಟ್ ಶಿವಬಸಪ್ಪ

**ಆರೋಪಣೆ**

**ಪ್ರಶ್ನೆ** : 1. ಆಪಾದನೆಗಳ ಸಾರಾಂಶ ನಿಮಗೆ ಅರ್ಥವಾಯಿತೇ?
**ಉತ್ತರ** : ಅರ್ಥವಾಯಿತು

**ಪ್ರಶ್ನೆ** : 2. ಆಪಾದನೆಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ ?
**ಉತ್ತರ** : ತಪ್ಪು ಮಾಡಿಲ್ಲ, ವಿಚಾರಣೆ ಆಗಲಿ.

ದಿನಾಂಕ : 17.08.2024 ರಂದು ಆರೋಪಿಗೆ ಆಪಾದನೆ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಅವರು ಕೊಟ್ಟ ಹೇಳಿಕೆಯನ್ನು ನನ್ನ ಸಮಕ್ಷಮ ಬರೆದುಕೊಂಡು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ.

**(ಶಿವಕುಮಾರ ಜಿ. ಜೆ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ**
**ಗುಂಡ್ಲುಪೇಟೆ .**

ಆರೋಪಿಯ ಸಹಿ :